*Tumbe Group of International Journals*
*Vol. 6, Issue No. 1, pp.67-78, January-April 2023*
**ISSN: 2581-8511**

# Representation of your class in the House of Representatives.

**Thippeswamy M[1]**

[1] Ph.D Researcher, Department of History
Kannada University, Hampi
Email Id: m.thippeswamy.phd@gmail.com

**Abstract**

It has been 38 years since the People's Representative Assembly was established in the Mysore state, but the lower castes did not get membership. Also, this meeting was a group of landlords and traders. This does not mean that there were no landlords and traders among you. It can be seen in the pages of history that in the state of Mysore, your caste was at the forefront of land ownership. Also, records are available about the highest revenue earners. In this background, the present article tries to discuss the opportunities provided to the lower castes in the People's Representative Assembly, lower caste members, landlords and traders, representation of the lower caste and its nature.

**Keywords**: House of Representatives, Lower Class, Members of House of Representatives.

# ಪ್ರಜಾಪ್ರತಿನಿಧಿ ಸಭೆಯಲ್ಲಿ ನಿಮ್ನವರ್ಗದ ಪ್ರಾತಿನಿಧ್ಯ.

**ತಿಪ್ಪೇಸ್ವಾಮಿ ಎಂ[1]**

[1] ಪಿಎಚ್,ಡಿ ಸಂಶೋಧನಾರ್ಥಿ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಇಮೇಲ್ ಐಡಿ: m.thippeswamy.phd@gmail.com

**ಸಾರಾಂಶ :**

ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆಯಾಗಿ 38 ವರ್ಷಗಳಾದರು ನಿಮ್ನವರ್ಗದವರಿಗೆ ಸದಸ್ಯತ್ವ ಸ್ಥಾನ ದೊರಕಿರಲಿಲ್ಲ. ಅಲ್ಲದೆ ಈ ಸಭೆಯು ಜಮೀನುದಾರರ ಮತ್ತು ವರ್ತಕರ ಸಮೂಹವಾಗಿತ್ತು. ಹಾಗೆಂದ ಮಾತ್ರಕ್ಕೆ ನಿಮ್ನವರ್ಗದಲ್ಲಿ ಜಮೀನುದಾರರು ಮತ್ತು ವರ್ತಕರು ಇರಲಿಲ್ಲವೆಂದಲ್ಲ. ಮೈಸೂರು ಸಂಸ್ಥಾನದಲ್ಲಿ ನಿಮ್ನವರ್ಗದವರೇ ಭೂ ಒಡೆತನದಲ್ಲಿ ಮಂಚೂಣಿಯಲ್ಲಿ ಇದ್ದುದ್ದನ್ನು ಚರಿತ್ರೆಯ ಪುಟಗಳಲ್ಲಿ ಕಾಣಬಹುದು. ಅಲ್ಲದೆ ಅತಿ ಹೆಚ್ಚು ಕಂದಾಯವನ್ನು ಕಟ್ಟುತ್ತಿದ್ದರ ಬಗ್ಗೆ ದಾಖಲೆಗಳು ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ನಿಮ್ನವರ್ಗದವರಿಗೆ ಕಲ್ಪಿಸಿದ

ಅವಕಾಶಗಳು, ನಿಮ್ನವರ್ಗದ ಸದಸ್ಯರು, ಜಮೀನುದಾರರ ಮತ್ತು ವರ್ತಕರು, ನಿಮ್ನವರ್ಗದ ಪ್ರಾತಿನಿಧ್ಯತೆ ಬೆಳದ ಬಗೆ ಅದರ ಸ್ವರೂಪ ಕುರಿತು ಈ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

**ಪ್ರಮುಖ ಪದಗಳು:** ಪ್ರಜಾಪ್ರತಿನಿಧಿ ಸಭೆ, ನಿಮ್ನವರ್ಗ, ಪ್ರಜಾಪ್ರತಿನಿಧಿ ಸಭೆ ಸದಸ್ಯರುಗಳು.

**ಪ್ರಜಾಪ್ರತಿನಿಧಿ ಸಭೆ ಮತ್ತು ನಿಮ್ನವರ್ಗ:**

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಹತ್ತನೆಯ ಚಾಮರಾಜ ಒಡೆಯರ್ ಅವರ ಕಾಲದಲ್ಲಿ ದಿವಾನರಾಗಿದ್ದ ಸಿ.ರಂಗಚಾರ್ಲುರವರು ಆಡಳಿತದಲ್ಲಿ ಸದಾ ಪ್ರಜೆಗಳ ಪಾಲ್ಗೊಳ್ಳುವಿಕೆ ಕುರಿತು ಒಂದು ವೇದಿಕೆಯನ್ನು ಕಲ್ಪಿಸುವ ಸಲುವಾಗಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು. ಈ ಸಭೆಯ ಸ್ಥಾಪನೆಯ ಹಿನ್ನಲೆ ಬಹಳ ಕುತೂಹಲಕಾರವಾಗಿದೆ. ಏಕೆಂದರೆ, ಇದಕ್ಕೆ ಪ್ರಜೆಗಳ ಬೇಡಿಕೆಯಾಗಲಿ ಅಥವಾ ತಮ್ಮ ಆಡಳಿತಾಧಿಕಾರವನ್ನು ಪ್ರಜಾಪ್ರತಿನಿಧಿಗಳೊಂದಿಗೆ ಹಂಚಿಕೊಳ್ಳಬೇಕೆಂಬ ಮಹಾರಾಜರ ಉತ್ಸುಕತೆಯಾಗಲಿ ಕಾರಣವಲ್ಲ.[1] ಒಂದೇಡೆ 1830ರ ನಗರದಂಗೆಯ ಪರಿಣಾಮಗಳು ಮೈಸೂರು ಸಂಸ್ಥಾನದ ಅರಸರ ಅಧಿಕಾರ ಶಕ್ತಿಯನ್ನು ತಲೆಕೆಳಗಾಗಿ ಮಾಡಿತ್ತು. ಅಲ್ಲದೆ 1880ರಲ್ಲಿ ಪುನಃ ಮೈಸೂರು ಸಂಸ್ಥಾನವನ್ನು ಮರಳಿ ಒಡೆಯರಿಗೆ ನೀಡಿದಾಗ ಆಡಳಿತದ ವಿಷಯದಲ್ಲಿ ಅತಿಜಾಗರೂಕರಾಗಿದ್ದರು. 1881ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಎರಡು ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿಸಿದರು.

**ಮೊದಲನೆಯದಾಗಿ**: ಹಿಂದಿನ ಸಾಲಿನ ಆಡಳಿತದ ಬಗೆಗಿನ ವರದಿಯನ್ನು ತಿಳಿಯುವುದು ಮತ್ತು ಮುಂದಿನ ಸಾಲಿನ ಆಡಳಿತದ ಬಗ್ಗೆ ತಮ್ಮ ಸಲಹೆಗಳನ್ನು ಪಡೆಯುವುದಾಗಿತ್ತು.

**ಎರಡನೆಯದು**: ಅಧಿಕಾರಶಾಹಿಯು ಎಂದಿಗೂ ಜನಹಿತದ ವಿರುದ್ಧ ವರ್ತಿಸದಂತೆ ನೋಡಿಕೊಳ್ಳುವುದಾಗಿತ್ತು.[2] 1881ರ ಅಕ್ಟೋಬರ್ 07 ರಂದು ಸಭೆಯ ಅಧ್ಯಕ್ಷತೆ ವಹಿಸಿದ ದಿವಾನ ರಂಗಾಚಾರ್ಲು ಅವರು ಮಾತನಾಡುತ್ತಾ, ಸಭಾಸ್ಥಾಪನೆಯ ಉದ್ದೇಶ, ಸರ್ಕಾರ ಮತ್ತು ಜನತೆಯ ನಡುವೆ ಉಂಟಾಗಬಹುದಾದ ಯಾವುದೇ ಅನುಮಾನಗಳನ್ನು ನಿವಾರಿಸಿ, ಆಡಳಿತ ಜನಹಿತಕ್ಕಾಗಿ ಕೆಲಸ ಮಾಡುತ್ತಿದೆಯೆಂದು ಮನದಟ್ಟು ಮಾಡಿಕೊಡುವುದಕ್ಕಾಗಿ ಎಂದು ತಿಳಿಸಿದರು. ಮುಂದುವರೆದು ಸಭೆಯ ಮೂಲಕ ಈ ನಿಟ್ಟಿನಲ್ಲಿ ಪ್ರಥಮ ಪ್ರಯತ್ನ ಮಾಡಲಾಗಿದೆ ಎಂದು ಹೇಳಿ, ಈ ಪ್ರಯತ್ನದಿಂದ ಜನತೆ, ಸರ್ಕಾರ ಮತ್ತು ಪ್ರಜೆಗಳ ಹಿತದಲ್ಲಿ ಸಾಮ್ಯವಿದೆ ಎಂದು ತಿಳಿದುಕೊಳ್ಳುತ್ತದೆಂದು ಆಶಿಸಿದರು.[3] ಪ್ರಜಾಪ್ರತಿನಿಧಿ ಸಭೆಯ ಅಧಿಕೃತ ನಾಮವು ವಿಸ್ತಾರವಾಗಿದ್ದು, ಅದು ಹೀಗಿದೆ. ಮೈಸೂರು ರಾಜ್ಯದ ಎಲ್ಲಾ ತಾಲ್ಲೂಕುಗಳ ರೈತರ ಮತ್ತು ವರ್ತಕರ ಪ್ರತಿನಿಧಿ ಸಭೆ" (The Assemdly of the Respresentative Raiyats and Merachants from all the Taluks of the Mysore State) ಸದಸ್ಯತ್ವವನ್ನು ಕೇವಲ ಜಮೀನ್ದಾರರು ಮತ್ತು ವರ್ತಕ ವರ್ಗಕ್ಕೆ ಮಾತ್ರ ಜಾಗರೂಕತೆಯಿಂದ ಮೀಸಲಾಗಿಡಲಾಯಿತು. ಕಾರಣವೇನೆಂದರೆ ಈ ವರ್ಗಗಳೇ ಮೈಸೂರಿನ ಪ್ರಜಾ ಸಮೂಹದ ಮೇಲೆ ಹಿಡಿತವನ್ನು ಇಟ್ಟುಕೊಂಡಿದ್ದ ಶಕ್ತವರ್ಗಗಳು.[4] ಈ ಶಕ್ತ ವರ್ಗಗಳನ್ನು ಹೊರತುಪಡಿಸಿ ಜನಸಾಮಾನ್ಯರು ತಮ್ಮ ಬೇಕು-ಬೇಡಗಳನ್ನು ಹೇಳಿಕೊಳ್ಳುವುದಕ್ಕಾಗಲಿ ಇಲ್ಲವೇ

Tumbe Group of International Journals
Vol. 6, Issue No. 1, pp.67-78, January-April 2023 ISSN: 2581-8511

ಸಮಸ್ಯೆಯನ್ನು ಪರಿಹರಿಸಲ್ಲಿಕ್ಕಾಗಲಿ ಈ ವೇದಿಕೆ ಅವಕಾಶ ಕಲ್ಪಿಸಲಿಲ್ಲವೆನ್ನಬಹುದು. ಹೆಸರಿನಲ್ಲಿರುವಂತೆ ಪ್ರಜಾಪ್ರತಿನಿಧಿ ಎಂಬುದು ಪ್ರಜೆಗಳನ್ನು ಹೊಂದಿರುವ ಸಭೆಯಾಗಿರದೆ ಶಕ್ತ ವರ್ಗಗಳ ಸಭೆಯಾಗಿತ್ತು. ಅಲ್ಲದೆ ಇದರಲ್ಲಿನ ಸದಸ್ಯರು ರಾಜಕೀಯವಾಗಿ ಯಾವುದೇ ಅಧಿಕಾರ ಹೊಂದಿರಲಿಲ್ಲ. ವರ್ಷಕ್ಕೆ ಒಮ್ಮೆ ದಸರಾ ಹಬ್ಬದ ಸಂದರ್ಭದಲ್ಲಿ ಕರೆಯಲಾಗುತ್ತಿದ್ದ ಈ ಸಭೆಗೆ ರಾಜ್ಯದ ಶ್ರೀಮಂತ ರೈತರು ವರ್ತಕರು ಮತ್ತು ಮೇಲಾಧಿಕಾರಿಗಳು ಆಹ್ವಾನಿತರು. ಮೈಸೂರಿಗೆ ಬಂದು ದಸರಾ ಉತ್ಸವವನ್ನು ಮಹಾರಾಜರ ದರ್ಬಾರು, ಅಂಬಾರಿ ಮೆರವಣಿಗೆಗಳನ್ನು ಕಣ್ಣು ತಣಿಯುವಷ್ಟು ನೋಡಿ ದಿವಾನರು ಹೇಳಿದ್ದನ್ನು ಕೇಳಿ, ಇದ್ರೆ ಮನವಿ ಅರ್ಪಿಸಿ ಊರುಗಳಿಗೆ ಮರಳುವುದೇ ಸದಸ್ಯರು ಮಾಡುತ್ತಿದ್ದ ಕೆಲಸವಾಗಿತ್ತು.[5] ಇಂತಹ ಅಪೂರ್ವವಾದ ಮಹಾ ಕಾರ್ಯವನ್ನು ಪ್ರಾರಂಭಿಸಿದರಾದರೂ ಆ ಆರಂಭಕ್ಕೆ ಯಾವ ಉತ್ಸವವನ್ನೂ ನಡೆಸಲಿಲ್ಲ. ಯಾವ ತುತ್ತೂರಿಯನ್ನೂ ಊದಿಸಲಿಲ್ಲ. ಯಾವ ಮಂಟಪ ವೇದಿಕೆಗಳನ್ನೂ ಕಟ್ಟಿಸಲಿಲ್ಲ.[6] ಇಂತಹ ಸಭೆಗಳಲ್ಲಿ ದಲಿತ ಮತ್ತು ಬುಡಕಟ್ಟು ಸಮುದಾಯಗಳಿಗೆ ಯಾವುದೇ ಪ್ರಾತಿನಿಧ್ಯತೆ ಇಲ್ಲದಿರುವುದನ್ನು ಕಾಣಬಹುದು. ಏಕೆಂದರೆ ಪ್ರಜಾಪ್ರತಿನಿಧಿಸಭೆ ಸ್ಥಾಪನೆಯಾಗಿ ಸುಮಾರು 38 (1881-1919) ವರ್ಷಗಳ ಕಾಲದವರೆಗೆ ದಲಿತ ಮತ್ತು ಬುಡಕಟ್ಟು ಸಮುದಾಯದವರಿಗೆ ಸದಸ್ಯತ್ವ ಸ್ಥಾನ ದೊರೆತಿರಲಿಲ್ಲ. ಅಲ್ಲದೆ ದಲಿತರನ್ನು ಹೊರತುಪಡಿಸಿ ಬುಡಕಟ್ಟು ಸಮುದಾಯಗಳು ರಾಜಕೀಯವಾಗಿ ಬೆಳದಿರಲಿಲ್ಲವೆನ್ನಬಹುದು. ಏಕೆಂದರೆ ಏಕೀಕರಣ ಪೂರ್ವ ಮೈಸೂರು ಸಂಸ್ಥಾನದಲ್ಲಿ 1950ರ ಸಂವಿಧಾನ ಜಾರಿಯಾದ ಹೊತ್ತಿಗೆ ಅಧಿಕೃತವಾಗಿ ಬುಡಕಟ್ಟುಗಳ ಪಟ್ಟಿಯಲ್ಲಿ ಹಸಲರು, ಜೇನು ಕುರುಬ, ಇರುಳಿಗ, ಕಾಡು ಕುರುಬ, ಮಲೇರು, ಸೋಲಿಗರು[7] ಇದ್ದು, ಈ ಬುಡಕಟ್ಟುಗಳು ಕಾಡನ್ನು ಬಿಟ್ಟರೆ ನಾಡಿನ ಜೊತೆ ನಂಟು ಹೊಂದಿದ್ದು ಕಡಿಮೆ ಎನ್ನಬಹುದು. ಅಲ್ಲದೆ ಕಾಡಿನಲ್ಲಿ ವಾಸವಾಗಿದ್ದ ಈ ಬುಡಕಟ್ಟು ಸಮುದಾಯಗಳಿಗೆ ಶಿಕ್ಷಣ ಮತ್ತು ಸಾಮಾಜಿಕ, ರಾಜಕೀಯ, ಸವಲತ್ತು ಮತ್ತು ಸಂಘಟನಾತ್ಮಕ ಘಟಾನವಳಿಗಳ ವೈಚಾರಿಕತೆ ಗ್ರಹಿಕೆ ಮತ್ತು ತಿಳುವಳಿಕೆ ದೂರದ ಮಾತಾಗಿತ್ತು. ಇನ್ನೂ ಮೈಸೂರು ಸಂಸ್ಥಾನದ ಜನಸಂಖ್ಯೆಯಲ್ಲಿ ಅಸ್ಪೃಶ್ಯರು 1/5 ನೇ ಭಾಗದಷ್ಟಿದ್ದು, ಶೇ. 21 ರಷ್ಟಿದ್ದ ಒಕ್ಕಲಿಗರನ್ನು ಬಿಟ್ಟರೆ ಎರಡನೆಯ ಬಹು ಸಂಖ್ಯಾತವರ್ಗ. ಈ ವರ್ಗ 'ಪಂಚಮರು' ಮತ್ತು 'ದಲಿತವರ್ಗ'(depressed classes) ಎಂದು ಬಳಕೆಯಲ್ಲಿತ್ತು.[8] ಇನ್ನೂ ದಲಿತ ಅಥವಾ ನಿಮ್ನವರ್ಗದ ಸಮುದಾಯವು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಪ್ರಜ್ಞೆಯನ್ನು ಬೆಳಸಿಕೊಳ್ಳುತ್ತ ಸಾಗಿತ್ತು. ಈ ಹಿನ್ನೆಲೆಯಲ್ಲಿ ಏಕೀಕರಣ ಪೂರ್ವ ಕರ್ನಾಟಕ-ಮೈಸೂರು ಸಂಸ್ಥಾನದಲ್ಲಿ ದಲಿತ ಮತ್ತು ಬುಡಕಟ್ಟು ಸಮುದಾಯಗಳ ರಾಜಕಾರಣ ಅಧ್ಯಯನ ಕ್ರಮದಲ್ಲಿ ದಲಿತ(ನಿಮ್ನ)ವರ್ಗದ ಸಮುದಾಯದ ರಾಜಕಾರಣವನ್ನು ಬಹುಪಾಲಾಗಿ ಕಾಣಬಹುದಾಗಿದೆ. ಪ್ರಜಾಪ್ರತಿನಿಧಿ ಸಭೆ 1918ಕ್ಕೂ ಪೂರ್ವದಲ್ಲಿ ನಿಮ್ನವರ್ಗದ ಸಮಸ್ಯೆಗಳನ್ನು ಆಲಿಸುವ ಗೋಜಿಗೆ ಹೋಗಿರಲಿಲ್ಲ. 25.10.1920ರಲ್ಲಿ ಮೊದಲ ಭಾರಿಗೆ ಮುರುಗೇಶನ್ ಪಿಳ್ಳೆ ಅವರು ಮಹಾರಾಜರಿಗೆ ದಲಿತ(ನಿಮ್ನ)ವರ್ಗಗಳ ಪರವಾಗಿ ಒಂದು ಮನವಿಯನ್ನು ಸಲ್ಲಿಸಿದರು. ಪ್ರಜಾಪ್ರತಿನಿಧಿ ಸಭೆಯಲ್ಲಿ 1923ರ ಸಾಂವಿಧಾನಿಕ ಸುಧಾರಣೆಗಳ ಪ್ರಕಾರ ದಲಿತ(ನಿಮ್ನ) ವರ್ಗಗಳಿಗೆ 10 ಹಾಗೂ ನ್ಯಾಯವಿದೇಯಕ ಸಭೆಗಳಲ್ಲಿ 2 ಸ್ಥಾನಗಳನ್ನು ಮೀಸಲಿರಿಸಿದರು. 1923ರ ಸಾಂವಿಧಾನಿಕ ಸುಧಾರಣೆಯಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯತ್ವ ಸ್ಥಾನವನ್ನು ವಿಸ್ತರಿಸಿತು. ಅದು 250ಕ್ಕೆ ನಿಗಧಿಗೊಂಡು ಗ್ರಾಮೀಣ, ನಗರ ಪ್ರದೇಶಗಳಿಂದ ಆಯ್ಕೆಮಾಡಲಾಗುವುದೆಂದು ಅಭಿಪ್ರಾಯ ವ್ಯಕ್ತಪಡಿಸಿತ್ತು. ಪ್ರಸ್ತುತ ಆಧುನಿಕ ವಿಧಾನಪರಿಷತ್ತು ಮಾದಿರಿಯನ್ನು

ಹೋಲುವಂತೆ ಅಂದಿನ ಸರ್ಕಾರದ ಮಟ್ಟದಲ್ಲಿ 1907ರಲ್ಲಿ ನ್ಯಾಯವಿಧಾಯಕ ಸಭೆ(ಲೆಜಿಸ್ಲೆಟಿವ್ ಕೌನ್ಸಿಲ್) ಅಸ್ತಿತ್ವಕ್ಕೆ ಬಂತು. 1914ರಲ್ಲಿ ಅದರ ಸದಸ್ಯರ ಸಂಖ್ಯೆಯನ್ನು 18ಕ್ಕೆ ಏರಿಸಿ, ಈ ಪೈಕಿ ನಾಲ್ವರನ್ನು ಕೆಳಮನೆಯಿಂದಲೂ, ನಾಲ್ವರನ್ನು ಎಂಟು ಜಿಲ್ಲೆಗಳಿಂದಲೂ ಆರಿಸಬೇಕೆಂದಾಯಿತು.[9] ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ನ್ಯಾಯ ವಿಧಾಯಕ ಸಭೆಯನ್ನು ವಿಸ್ತರಿಸಿ ಅದರ ಸದಸ್ಯಸಂಖ್ಯೆಯನ್ನು 18ರಿಂದ 24ಕ್ಕೆ ಅವರು ಹೆಚ್ಚಿಸಿದರು.(1914). ಈ ಪೈಕಿ ನಾಲ್ಕು ಸದಸ್ಯರನ್ನು ಪ್ರಜಾಪ್ರತಿನಿಧಿ ಸಭೆಯೂ, ನಾಲ್ವರನ್ನೂ ಎಂಟು ಜಿಲ್ಲೆಗಳ ಮತದಾರರೂ ಆಯ್ಕೆಮಾಡಬೇಕೆಂದಾಯಿತು.[10] 1919ರ ಮಾಂಟೆಗೂ-ಚೆಲ್ಮ್ಸ್ ಫರ್ಡ್ ಕಾಯ್ದೆಯ ಅನ್ವಯ ಆಡಳಿತ ಘಟಕಗಳಲ್ಲಿ ಎಲ್ಲ ಸಮುದಾಯಗಳು ಪ್ರಾತಿನಿಧ್ಯತೆಯನ್ನು ಹೊಂದಿರಬೇಕೆಂಬ ಅಂಶವು ಹಲವು ಸಮುದಾಯಗಳಿಗೆ ಒಂದು ಸಖ್ಯ ಅವಕಾಶವನ್ನು ಕಲ್ಪಿಸಿದಂತಾಯಿತು. ಈ ಹಿನ್ನೆಲೆಯಲ್ಲಿ ಮಹಾರಾಜರು ೧೯೧೯ ಮತ್ತು ೧೯೨೩ರಲ್ಲಿ "Special Interest and Public Association"ಗಳಿಗೆ ಕೊಟ್ಟ ವಿಶೇಷ ಪ್ರಾತಿನಿಧ್ಯದ ಮೇರೆಗೆ ೧೯೧೯ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಮೊದಲ ಬಾರಿಗೆ ಪಂಚಮರು ನೇಮಿಸಲ್ಪಟ್ಟರು. ಹೀಗೆ ನೇಮಕಗೊಂಡ ದಲಿತ ನಾಯಕರೇ ತಮಿಳು ಮೂಲದ ಪಿ.ಮುರುಗೇಶಂ ಪಿಳ್ಳೆಯವರು. ಇವರ ಅಧ್ಯಕ್ಷತೆಯಲ್ಲಿ ೧೯೧೮ರಲ್ಲಿ ಸ್ಥಾಪಿತವಾದ "ಆದಿದ್ರಾವಿಡ ಅಭಿವೃದ್ಧಿ ಸಂಘ" ಎಂಬ ಗುರುತರವಾದ ಸಂಘಟನೆಯೇ ಮೈಸೂರು ಸಂಸ್ಥಾನದ ಮೊದಲ ದಲಿತ ಸಂಘಟನೆ ಇದು ಸಂಸ್ಥಾನದಲ್ಲಿ ಆದಿ ಚಳವಳಿಯ ಪ್ರಥಮ ಹಂತವನ್ನು ಉದ್ಘಾಟಿಸಿತ್ತು.[11] ಅನಾದಿಕಾಲದಿಂದಲೂ ಶೋಷಿತ ಸಮುದಾಯಗಳಾಗಿದ್ದ ಮತ್ತು ಬ್ರಾಹ್ಮಣೇತರರ ಸ್ವ-ಹಿತಾಸಕ್ತಿಯಿಂದ ಬೇಸರಗೊಂಡಿದ್ದ ದಲಿತ(ನಿಮ್ನ)ವರ್ಗವು ರಾಜಕೀಯವಾಗಿ ಮತ್ತು ಸಮುದಾಯಿಕವಾಗಿ ಸಂಘಟಕರಾಗಲು ಸಂಘಟನೆ ಬೆಳವಣಿಗೆಯನ್ನು ಕಾಣಬಹುದು. ಸಂಸ್ಥಾನವು ದಲಿತ ವರ್ಗಗಳಿಗೆ ಕೆಲವು ಶೈಕ್ಷಣಿಕ ಮತ್ತು ಸಾಮಾಜಿಕ, ರಾಜಕೀಯ ಸೌಲಭ್ಯಗಳನ್ನು ದಲಿತ ಮುಖಂಡರ ಮನವಿಗಳನ್ನು ಅರಿತು ನೀಡತೊಡಗಿತು. ಮೈಸೂರು ಸರ್ಕಾರವೇ, ಬಹುಶಃ ಭಾರತದಲ್ಲೇ ಪ್ರಪ್ರಥಮವಾಗಿ ಅಸ್ಪೃಶ್ಯರಿಗೆ ವಿದ್ಯಾ ಸೌಕರ್ಯಗಳನ್ನು (1890)ರಲ್ಲಿ ಕಲ್ಪಿಸಿಕೊಟ್ಟರೂ, ಈ ವರ್ಗದಿಂದ 1918 ಮತ್ತು 1925 ರಲ್ಲಿ ಒಬ್ಬೊಬ್ಬ ಅಭ್ಯರ್ಥಿ ಕ್ರಮವಾಗಿ ಮೆಟ್ರಿಕ್ಯುಲೇಷನ್ ಮತ್ತು ಪದವಿ ತರಗತಿಗಳಲ್ಲಿ ಮೊದಲಿಗರಾಗಿ ತೇರ್ಗಡೆಯಾದರು.[12] ಸಂಸ್ಥಾನವು ಆಡಳಿತದಲ್ಲಿ ಪ್ರಜಾತಂತ್ರವನ್ನು ವಿಸ್ತರಿಸಬೇಕೆಂಬ ಬೇಡಿಕೆಯ ಪರಿಶೀಲನೆಗೆ 1923ರಲ್ಲಿ ಸೀಲ್ ಸಮಿತಿಯನ್ನು ನೇಮಿಸಿ, ಅದರ ಸಲಹೆಯಂತೆ ಮೇಲ್ಮನೆಯ ಸದಸ್ಯತ್ವವನ್ನು 50, ಕೆಳಮನೆಯದನ್ನು 250 ರಿಂದ 275 ಎಂದೂ ಗೊತ್ತಪಡಿಸಲಾಯಿತು. ಮೇಲ್ಮನೆಯಲ್ಲಿ ಅರ್ಧಕ್ಕಿಂತ ಹೆಚ್ಚು ಸದಸ್ಯರು ಅಧಿಕಾರೇತರರಿರಬೇಕು; ಕೆಳಮನೆಯಲ್ಲಿ ಚುನಾಯಿತರೇ ಬಹಸಂಖ್ಯಾತರರಿರಬೇಕು ಎಂದಾಯಿತು. ಚುನಾವಣೆಯಲ್ಲಿ ಮತಾಧಿಕಾರವನ್ನು ವಿಸ್ತರಿಸಲಾಯಿತಲ್ಲದೇ ಸ್ತ್ರೀಯರಿಗೂ ಮತಾಧೀಕಾರ ನೀಡಲಾಯಿತು. ರೂ.50 ಭೂಕಂದಾಯ ಅಥವಾ ರೂ.10 ಪುರಸಭಾ ತೆರಿಗೆ ನೀಡುವವರು ಹಾಗೂ ಆದಾಯ ತೆರಿಗೆ ನೀಡುವ ಎಲ್ಲರೂ ಮತದಾರರಾದರು. ಪದವೀಧರರಿಗೂ ಮತಾಧಿಕಾರವಿತ್ತು. ಇಂಗ್ಲೆಂಡಿನಲ್ಲಿ ಮಹಿಳೆಯರಿಗೆ ಮತಾಧಿಕಾರವಿತ್ತ(1918) ಐದೇ ವರ್ಷದಲ್ಲಿ ಮೈಸೂರಿನ ಮಹಿಳೆಯರೂ ಮತಾಧಿಕಾರ ಪಡೆದರು. ಆದರೆ ದಿವಾನರು ಪ್ರಜಾಪ್ರತಿನಿಧಿಗಳಿಗೆ ಜವಾಬ್ದಾರರಾಗಿರಲಿಲ್ಲ.[13] ಈ ಬೆಳವಣಿಗೆಗಳು ಸಮುದಾಯಗಳು ರಾಜಕೀಯ ಮತ್ತು ಪ್ರಗತಿದಾಯಕ ಹಾದಿಯಲ್ಲಿ ಮಾರ್ಗವನ್ನು ಕಲ್ಪಿಸಿದವು. ಇನ್ನೂ ೧೯೨೩ರಲ್ಲಿ ಮೈಸೂರಿನಲ್ಲಾದ ಸಂವಿಧಾನ

ಸುಧಾರಣೆಯ ಫಲವಾಗಿ ೧೯೨೩ - ೨೪ರ ವೇಳೆಗೆ ಮೈಸೂರಿನಲ್ಲಿ ಒಟ್ಟು ೫ ಜನ ದಲಿತ ಸದಸ್ಯರು ಪ್ರತಿನಿಧಿ ಸಭೆಗೆ ನೇಮಕಗೊಂಡಿದ್ದರು.[14] ಹೀಗೆ ಆಯ್ಕೆಯಾದ ನಾಯಕರುಗಳು ಶೋಷಿತರ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಸರ್ಕಾರದ ಗಮನಕ್ಕೆ ತಂದು ಸ್ಪಂದಿಸುವ ಕಾರ್ಯವನ್ನು ಮಾಡತೊಡಗಿದರು. ಅಲ್ಲದೆ ನಿಮ್ನವರ್ಗಗಳಿಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ 10 ಹಾಗೂ ನ್ಯಾಯವಿಧಾಯಕ ಸಭೆಯಲ್ಲಿ 2 ಸ್ಥಾನಗಳು ಕಾಯ್ದಿರಿಸಲ್ಪಟ್ಟವು.[15] ಈ ಕಾಯ್ದಿರಿಸಲ್ಪಟ್ಟ ಸ್ಥಾನಗಳು ನಾಮಂಕಿತವಾಗಿದ್ದವು. ಅಲ್ಲದೆ ಸದಸ್ಯರ ಅಲ್ಪಸಂಖ್ಯಾಬಲದಿಂದ ತಮ್ಮ ಬೇಡಿಕೆಗಳ್ಳು ಈಡೇರಿಸಿಕೊಳ್ಳುವುದು ಕಷ್ಟದಾಯಕವಾಗಿತ್ತು. ಅಲ್ಲದೆ ರಾಜಕೀಯ ರಂಗದಲ್ಲಿ ಇವರ ಪ್ರಭಾವ ಕುಂಠಿತವಾಗಿತ್ತು. ಈ ನಡುವೆ ೧೯೩೦ರ ಅಕ್ಟೋಬರ್ ತಿಂಗಳ ೧೫ನೇ ತಾರೀಖಿನಂದು ಅಯ್ಯರ್‌ರವರು ಡಿಪ್ರೆಸ್ಡ್ ಕ್ಲಾಸಸ್ ಅಭಿವೃದ್ಧಿ ಸಂಸ್ಥೆಯೊಂದನ್ನು (ಅಡ್ವಾನ್ಸ್ ಟ್ರಸ್ಟ್) ಸ್ಥಾಪಿಸಬೇಕೆಂದು ಶ್ರೀಮಾನ್ ಮಹಾರಾಜರ ಘನ ಸರ್ಕಾರಕ್ಕೆ ಭಿನ್ನವಿಸಿಕೊಂಡರು. ಈ ವರ್ಗಗಳ ನ್ಯಾಯಯುತ ಬೇಡಿಕೆಯ ಪರಿಣಾಮ ಈ ಸಮಿತಿಯು ಪ್ರಜಾಪ್ರತಿನಿಧಿ ಸಭೆಯ ಸದಸ್ಯತ್ವವನ್ನು ಆರರಿಂದ ಹತ್ತಕ್ಕೆ ಹೆಚ್ಚಿಸಲು ಸಲಹೆ ನೀಡಿತು. ಅದರಂತೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು.[16] ಈಗಾಗಲೇ ಬ್ರಿಟಿಷ್ ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರಗಳು ರಚನೆಗೊಂಡಂತೆ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ರಚನೆಗೆ ಬೇಡಿಕೆ ಹೆಚ್ಚಾಯಿತು. ಈ ಸಂದರ್ಭದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಕಾಂಗ್ರೆಸ್ ಪಕ್ಷದ ಒತ್ತಡವು ಮೈಸೂರು ಸಂಸ್ಥಾನದ ರಾಜಕೀಯ ಪ್ರಾತಿನಿಧ್ಯತೆಯಲ್ಲಿ ಏರಿಳಿತಗಳಾಗುವಂತೆ ಮಾಡಿತು. ಈ ಹಿನ್ನಲೆಯಲ್ಲಿ ೧೯೩೨ರಲ್ಲಾದ ಸಾಂವಿಧಾನಿಕ ಸುಧಾರಣೆಯ ಪ್ರಯುಕ್ತ ಪ್ರತಿನಿಧಿಸಭೆಯ ಸ್ಥಾನಗಳು ಪುನರ್‌ವ್ಯವಸ್ಥಿತಗೊಂಡು ಒಂದು ತಾಲ್ಲೂಕಿನಲ್ಲಿ ಜನಸಂಖ್ಯೆ ಒಂದು ಲಕ್ಷವಿದ್ದರೇ ಅದರಿಂದ ಮೂರು ಸದಸ್ಯರನ್ನು ತೆಗೆದುಕೊಳ್ಳುವಂತೆ, ಅದೇ ರೀತಿ ತಾಲ್ಲೂಕು ಅಥವ ಸಬ್ ತಾಲ್ಲೂಕಿನಲ್ಲಿ ಐವತ್ತು ಸಾವಿರದಿಂದ ಒಂದು ಲಕ್ಷದವರೆಗಿನ ಜನಸಂಖ್ಯೆಗೆ ಇಬ್ಬರು ಹಾಗೂ ೫೦ ಸಾವಿರಕ್ಕಿಂತಲೂ ಕಡಿಮೆ ಇರುವ ತಾಲ್ಲೂಕಿನಿಂದ ಒಬ್ಬರು ಸದಸ್ಯರುಗಳನ್ನು ತೆಗೆದುಕೊಳ್ಳುವಂತೆ ನಿಯಮವನ್ನು ರೂಪಿಸಲಾಯಿತು.[17] ಈ ಹಿನ್ನಲೆಯಲ್ಲಿ ೧೯೩೫ರಲ್ಲಿ ಸಂಸ್ಥಾನದ ಅಧಿಕಾರಯುತ ಸಂಸ್ಥೆಯಾದ ನ್ಯಾಯವಿಧಾಯಕ ಸಭೆಯಲ್ಲೂ ಅವರಿಗೆ ಸ್ಥಾನವನ್ನು ಕಲ್ಪಿಸಿ, ಸದಸ್ಯರಿಗೆ ಮತದಾನದ ಹಕ್ಕನ್ನು ನೀಡಲಾಯಿತು.[18] ಹೀಗೆ ಏರಿಕೆಯಾದ ನಿಮ್ನವರ್ಗದ ರಾಜಕೀಯ ಸ್ಥಾನಮಾನಗಳಿಂದ ರಾಜಕಾರಣದ ಚದುರಂಗದಲ್ಲಿ ಸಂಘಟಿತರಾದ ನಿಮ್ನವರ್ಗದ ನಾಯಕರ ಹಕ್ಕೊತ್ತಾಯದ ಧ್ವನಿ ಪರಿಣಾಮಕಾರಿಯಾಗತೊಡಗಿದವು. 1936ರಲ್ಲಿ ಮೈಸೂರಿನ ಮಹಾರಾಜರು ಪ್ರತಿನಿಧಿಸಂಸ್ಥೆಗಳ ಹರಿಜನ ಸದಸ್ಯರನ್ನು ದಸರಾ ದರ್ಬಾರಿಗೆ ಸೇರಿಸಿಕೊಂಡದ್ದೂ ಸಹ ಇನ್ನಷ್ಟು ಉತ್ಸಾಹಕ್ಕೆ ಕಾರಣವಾಯಿತು.[19] ಇನ್ನೂ ೧೯೩೮ರಲ್ಲಿ ೩ನೇ ಹಂತದ ಸಾಂವಿಧಾನಿಕ ಸುಧಾರಣೆಗಳು ಜಾರಿಗೊಂಡವು. ಈ ಸುಧಾರಣಾ ಸಮಿತಿಯವರು ನಿಮ್ನ ವರ್ಗದವರಿಗಾಗಿ ಖಾತರಿಪಡಿಸಿ ಪ್ರತ್ಯೇಕಿಸಿಡಬೇಕಾದ ಸದಸ್ಯ ಸ್ಥಾನಗಳನ್ನು ೧೦ ರಿಂದ ೩೦ಕ್ಕೆ ಹೆಚ್ಚಿಸಬೇಕೆಂದು ಸಲಹೆ ಮಾಡಿದರು. ನಿಮ್ನವರ್ಗಗಳ ಜನಸಂಖ್ಯೆಯು ಹೆಚ್ಚಾಗಿರುವುದೂ ಮತ್ತು ಸದಸ್ಯ ಸ್ಥಾನಗಳಲ್ಲಿ ಜನಸಂಖ್ಯೆಯು ಹೆಚ್ಚಾಗಿರುವುದೂ, ಸದಸ್ಯ ಸ್ಥಾನನಗಳಿಗೆ ಇನ್ನು ಮುಂದೆ ವಿದ್ಯಾವಂತರೂ ಮತ್ತು ಸಮರ್ಥರೂ ಹೆಚ್ಚು ಹೆಚ್ಚಾಗಿ ದೊರೆಯುವುದೂ ಅದಕ್ಕೆ ಕಾರಣವಾಗಿತ್ತು.[20] ಅಲ್ಲದೆ 1938ರಲ್ಲಿ ಸಾಂವಿಧಾನಿಕ ಸುಧಾರಣೆಯ ಪ್ರಯುಕ್ತ ನಿಮ್ನವರ್ಗದವರಿಗೆ ಮೀಸಲಿರಿಸಿದ ಸ್ಥಾನಗಳ ಪೈಕಿ 10 ರಿಂದ 30ಕ್ಕೆ ಹೆಚ್ಚಿಸಬೇಕೆಂದು ಸಲಹೆ

ಒಡಮೂಡಿದವು. ನಿಮ್ನವರ್ಗಗಳ ಜನಸಂಖ್ಯೆ, ವಿದ್ಯಾವಂತರ ಆಧಾರಿತವಾಗಿ ಬೆಳವಣಿಗೆಗೊಳ್ಳುತ್ತಿರುವುದರಿಂದ ಅವಕಾಶ ಕಲ್ಪಿಸಬೇಕಂದು ಸಲಹೆಗಳನ್ನು ಸಭೆ ನೀಡಿತು. ಅದರಂತೆ ಈ ಕೆಳಕಂಡಂತೆ ಸಮುದಾಯವಾರು ಮೀಸಲು ಸ್ಥಾನಗಳನ್ನು ಕಾಣಬಹುದಾಗಿದೆ.

| | | **ಸದಸ್ಯ ಸ್ಥಾನಗಳು** |
|---|---|---|
| 1 | ಗ್ರಾಮಾಂತರ ಚುನಾವಣೆ ಸ್ಥಾನಗಳು | ೧೬೫ |
| 2 | ಪೌರಚುನಾವಣೆ ಸ್ಥಾನಗಳು | ೪೫ |
| 3 | ಅಲ್ಪಸಂಖ್ಯಾತ ಪಂಗಡಗಳು | |
| | • ಮುಸಲ್ಮಾನರು | ೩೦ |
| | • ನಿಮ್ನ ವರ್ಗಗಳವರು | ೩೦ |
| | • ಭಾರತೀಯ ಕ್ರೆöÊಸ್ತರು | ೫ |
| | • ಯುರೋಪಿಯನ್ನರು | ೧ |
| 4 | ವಿಶೇಷ ದೇಶ ಪಂಗಡಗಳು | ೨೮ |
| | | ಒಟ್ಟು - ೩೦೦ |

ಈ ಬಗೆಯ ಪ್ರಾತಿನಿಧ್ಯದ ಹಂಚಿಕೆಯು ಬಹುಸಂಖ್ಯಾತ ದಲಿತರಲ್ಲಿ ಒಂದು ಬಗೆಯ ಅಸಮಾಧಾನವನ್ನುಂಟು ಮಾಡಿತ್ತು.[21] ಏಕೆಂದರೆ ನಿಮ್ನವರ್ಗ ಮತ್ತು ಮುಸಲ್ಮಾನರಿಗೂ ತಲಾ 30 ಸ್ಥಾನಗಳು ಹಂಚಿಕೆಯಾಗಿದ್ದು, ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಬಹುಸಂಖ್ಯಾತರಾಗಿದ್ದ ನಿಮ್ನವರ್ಗವನ್ನು ಸಮೀಕರಿಸಿದ್ದು ಬೇಸರದ ಸಂಗತಿಯಾಗಿತ್ತು. ಈ ಅಸಮಾಧಾನವನ್ನು ಅವರು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಹೊರಗೆಡುವ ಮೂಲಕ ಸರ್ಕಾರದ ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದ್ದರು. ರಾಜಕೀಯ ಹಕ್ಕುಭಾಧ್ಯತೆಗಳ ಡೆಲಿಮಿನೇಷನ್ ಸಮಿತಿಯ ಸಲಹೆಯ ಮೇರೆಗೆ ೧೯೪೦ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ದಲಿತರಿಗೆ ದೊರಕಿದ ಮೂವತ್ತು ಸ್ಥಾನಗಳಲ್ಲಿ ನಾಲ್ಕು ಸ್ಪೃಶ್ಯ ಜಾತಿಯವರಿಗೆ (ಕೊರಚ ಮತ್ತು ಕೊರಮ-೧ ಸ್ಥಾನ, ಲಂಬಾಣಿ-೨, ವಡ್ಡ-೧ ಸ್ಥಾನ) ನೀಡಲಾಗಿ ಉಳಿದ ೨೬ ಸ್ಥಾನಗಳನ್ನು ಅಸ್ಪೃಶ್ಯರಿಗೆ ಮೀಸಲಾಗಿರಿಸಲಾಗಿತ್ತು. ಅದರಲ್ಲೂ ಒಂದು ಸ್ಥಾನವನ್ನು ಅಸ್ಪೃಶ್ಯ ಮಹಿಳೆಯರಿಗೆ ನೀಡಲಾಯಿತು.[22] ಪ್ರಾರಂಭದಲ್ಲಿ ಪ್ರಜಾಪ್ರತಿನಿಧಿಯ ಮತದಾರರ ಅರ್ಹತೆಯ ಅನ್ವಯ ದಲಿತರಿಗೆ ಅನ್ವಯಿಸುವುದು ಕಷ್ಟದಾಯಕವಾಗಿತ್ತು. ಏಕೆಂದರ ಇಲ್ಲಿ ಜಮೀನುದಾರರು, ಶ್ರೀಮಂತ ವರ್ಗದವರಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಭೂ ಕಂದಾಯವನ್ನು 25 ರೂಗಳಿಂದ 15 ರೂಗೆ, ಸ್ಥಳೀಯ ಪಂಚಾಯಿತಿಯ ತೆರಿಗೆ ಪಾವತಿಯನ್ನು 5 ರೂಗಳಿಂದ 4 ರೂಗೆ, ಇಳಿಸಿ ಅವಕಾಶ ಕಲ್ಪಿಸಿಕೊಡಲಾಯಿತು. ಇನ್ನೂ ಶೈಕ್ಷಣಿಕವಾಗಿ ಪದವೀಧರರನ್ನು ಹೊರತುಪಡಿಸಿ ಎಸ್.ಎಸ್.ಎಲ್.ಸಿ ಮತ್ತು ಮಹಿಳೆಯರಿಗೆ ಕಿರಿಯ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಮತದಾನದ ಹಕ್ಕನ್ನು ವಿಸ್ತರಿಸಲಾಯಿತು. ಮುಂದುವರೆದು ಭೂ ಕಂದಾಯವನ್ನು 15 ರೂಗಳಿಂದ 3 ರೂಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳ ತೆರಿಗೆಯನ್ನು 4 ರೂಗಳಿಂದ 2 ರೂಗಳಿಗೆ ಇಳಿಸಲಾಯಿತು.[23] ಈ ರೀತಿಯ ಸಡಿಲಿಕೆಗಳಿಂದಾಗಿ ಸಾರ್ವಜನಿಕರು ಹೆಚ್ಚುಪಾಲು ರಾಜಕೀಯವಾಗಿ ಭಾಗವಹಿಸಲು ಮುಂದಾದರು. ಈ ಹಿನ್ನೆಲೆಯಲ್ಲಿ ನಿಮ್ನ ವರ್ಗಗಳಿಗೆ ಅರ್ಹತೆಯ ಮಾನದಂಡಗಳಲ್ಲಿ ಮತ್ತಷ್ಟು ರಿಯಾಯಿತಿಯನ್ನು ನೀಡಲಾಯಿತು. ಅದು ಭೂಕಂದಾಯದ ಪ್ರಮಾಣವನ್ನು ೩ ರೂಪಾಯಿಗಳಿಗೂ, ಗ್ರಾಮಪಂಚಾಯಿತಿ ಮತ್ತು ಮುನಿಸಿಪಾಲಿಟಿಯ ಪಾವತಿಗೆಯನ್ನು ೨ ರೂಪಾಯಿಗಳಿಗೆ ಇಳಿಸಲಾಯಿತು. ಅಲ್ಲದೇ ಶೈಕ್ಷಣಿಕ ಅರ್ಹತೆಗಳನ್ನು ಕಡಿಮೆಗೊಳಿಸಿದ

ಪರಿಣಾಮ ನಿಮ್ನವರ್ಗಗಳಲ್ಲೂ ಮತದಾರರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಯಿತು. ಹಾಗಾಗಿಯೇ ಪ್ರಜಾಪ್ರತಿನಿಧಿ ಸಭೆಯಲ್ಲಿ ೩೦ ಹಾಗೂ ನ್ಯಾಯವಿದಾಯಕ ಸಭೆಯಲ್ಲಿ ೪ ಸ್ಥಾನಗಳನ್ನು ನಿಮ್ನವರ್ಗದ ಪ್ರತಿನಿಧಿಗಳಿಗೆ ಕಾಯ್ದಿರಿಸಲಾಗಿತ್ತು. ಈ ಕುರಿತು ನಿಮ್ನವರ್ಗದ ಸದಸ್ಯರಾದ ಎನ್.ಹನುಮಂತಪ್ಪನವರು ಮತ್ತು ವೆಂಕಟರಾಮನ್ ಬೋಯಿಯವರು ೬೫ ಲಕ್ಷ ಸಂಸ್ಥಾನದ ಜನಸಂಖ್ಯೆಯಲ್ಲಿ ೧೧ ಲಕ್ಷ ನಿಮ್ನವರ್ಗಗಳಿದ್ದು, ಸಾಂವಿಧಾನಿಕ ಭಾಗಗಳಾದ ಲೆಜಿಸ್ಲೇಟಿವ್ ಕೌನ್ಸಿಲ್, ಪ್ರಜಾಪ್ರತಿನಿಧಿ ಸಭೆ, ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಲ್ ಬೋರ್ಡ್, ಸ್ಕೂಲ್ ಬೋರ್ಡ್ಗಳಲ್ಲಿ ಅವರ ಪಾತ್ರಿನಿಧ್ಯವನ್ನು ಹೆಚ್ಚಿಸಬೇಕೆಂದು, ಈ ನೆಲೆಯಲ್ಲಿ ಜಿಲ್ಲೆಗೆ ೫ ರಂತೆ ಒಟ್ಟು ೪೦ ಸ್ಥಾನಗಳನ್ನು ಪ್ರಜಾಪ್ರತಿನಿಧಿ ಸಭೆಗೂ, ೪ ಸ್ಥಾನಗಳನ್ನು ಜಿಲ್ಲಾ ಬೋರ್ಡಿಗೂ ನೀಡಬೇಕೆಂಬ ಮನವಿಯನ್ನು ಸಲ್ಲಿಸಿದರು. ಸರ್ಕಾರವು ಇದನ್ನು ಸಹಾನುಭೂತಿಯಿಂದಲೇ ಪರಿಗಣಿಸಿತ್ತು.[24] 1938ರಲ್ಲಿ ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯ ಸಮಿತಿಯು ಸಂವಿಧಾನ ಸುಧಾರಣಾ ಕ್ರಮಗಳನ್ನು ಸರ್ಕಾರವು 1940ರಲ್ಲಿ ಸುಧಾರಣೆಗಳನ್ನು ಘೋಷಿಸಿತು. ಅದರನ್ವಯ 1940ರ ವೇಳೆಗೆ ಮೂರುಬಾರಿ ಮತದಾರರ ಅರ್ಹತೆಯಲ್ಲಿ ಕಡಿತವನ್ನು ಮಾಡಿದರೂ, ಒಟ್ಟು ಮತದಾರರ ಸಂಖ್ಯೆ ಕೇವಲ 3,57,223 ಅಥವಾ ಜನಸಂಖ್ಯೆಯ ಶೇ. 4.6 ಭಾಗ ಮಾತ್ರವಿತ್ತು. ಈ ಶೇಕಡಾವಾರು ಬ್ರಿಟಿಷ್ ಭಾರತದ 905 ಕ್ಕೆ ಹೋಲಿಸಿದರೆ ಶೇ. 50 ರಷ್ಟು ಕಡಿಮೆ ಇತ್ತು.[25] ೧೯೪೦ರ ನಂತರ ನ್ಯಾಯವಿಧ್ಯೇಯಕ ಸಭೆಯ ಸದಸ್ಯ ಸ್ಥಾನವನ್ನು ೪ಕ್ಕೆ ಏರಿಸಲಾಯಿತು. ೧೯೪೧ರಲ್ಲಿ ಪ್ರತಿನಿಧಿ ಸಭೆಯ ಸದಸ್ಯತ್ವವನ್ನು ೩೪ ಕ್ಕೇರಿಸಲಾಗಿತ್ತು. ಪ್ರತಿನಿಧಿ¸Àಭೆಗೆ ೧೯೨೭ರಲ್ಲಿ ಸ್ತಿçÃಯರಿಗೂ ಸದಸ್ಯತ್ವವನ್ನು ನೀಡಲಾಗಿದ್ದರಿಂದ ೧೯೪೧ ಹಾಗೂ ೧೯೪೫ರಲ್ಲಿ ಕ್ರಮವಾಗಿ ಮೈಸೂರಿನಿಂದ ಪುಟ್ಟಮಾದಮ್ಮ ಹಾಗೂ ಕೋಲಾರದಿಂದ ರುಕ್ಮಣಿಯಮ್ಮ ಎಂಬ ಇಬ್ಬರು ನಿಮ್ನ ವರ್ಗದ ಮಹಿಳೆಯರು ಆಯ್ಕೆಯಾದರು.[26] ಹೀಗೆ ನಿಮ್ನವರ್ಗದ ಸದಸ್ಯರು ರಾಜಕೀಯ ಅಧಿಕಾರವನ್ನು ಪಡೆಯುವುದರ ಮೂಲಕ ತಮ್ಮ ಹಿತಾಸಕ್ತಿಗಾಗಿ, ರಕ್ಷಣೆಗಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ನಿಮ್ನವರ್ಗದ ಸಮುದಾಯದ ನೈತಿಕ ಬಲವನ್ನು ದ್ವಿಗುಣಗೊಳಿಸತೊಡಗಿತು. ಪ್ರಜಾಪ್ರತಿನಿಧಿ ಸಭೆಯ ನಿಯಮಗಳು ನಿಮ್ನವರ್ಗಗಳು ಹಿತಾಸಕ್ತಿ ಅಥವಾ ಅರ್ಹತೆಗೆ ಸಮೀಕರಿಸುವ ನಿಟ್ಟಿನಲ್ಲಿ ಮಹತ್ತರ ಬದಲಾವಣೆಯನ್ನು ತರಲಾಯಿತು. ಇದು ನಿಮ್ನವರ್ಗದ ಸಮುದಾಯಗಳು ರಾಜಕೀಯವಾಗಿ ಮುನ್ನೆಲೆಗೆ ಬರಲು ಕಲ್ಪಿಸಿಕೊಟ್ಟ ವೇದಿಕೆಯಾಗಿ ಪರಿಣಮಿಸಿತು. ನಿಮ್ನವರ್ಗದ ಸದಸ್ಯರಾದ ಹುಚ್ಚಣ್ಣನವರು 1942ರ ಪ್ರತಿನಿಧಿ ಸಭೆಯಲ್ಲಿ ನಿರ್ಣಯವೊಂದನ್ನು ಚರ್ಚೆಗೆ ತಂದು ಸಂಸ್ಥಾನದಲ್ಲಿರುವ ಎಲ್ಲ ಗ್ರಾಮ ಪಂಚಾಯ್ತಿಗಳಲ್ಲಿಯೂ ಮತ್ತು ಮುನಿಸಿಪಾಲಿಟಿಗಳಲ್ಲಿಯೂ ಆದಿಕರ್ನಾಟಕ ಅಥವಾ ಆದಿದ್ರಾವಿಡ ಪ್ರಾತಿನಿಧ್ಯವಿರುವಂತೆ ಏರ್ಪಡಿಸಬೇಕೆಂದು[27] ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಯಿತು. ಇದು ಸಮುದಾಯ ಜಾಗೃತಿ ಪ್ರಜ್ಞೆ ಆಶಯಗಳಾಗಿದ್ದು, ತಮ್ಮ ತಮ್ಮ ಸಮುದಾಯಗಳಿಗೆ ಅವಕಾಶ-ಸೌಲಭ್ಯಗಳನ್ನು ಪಡೆಯುವ ಉದ್ದೇಶವನ್ನು ಒಳಗೊಂಡಿತ್ತು. ಇದಕ್ಕೆ ಪೂರಕವಾಗಿ ಸ್ಥಳೀಯ ಸಂಸ್ಥೆಗಳ ಸಚಿವರಾಗಿದ್ದ ಗುಂಡಪ್ಪಗೌಡ ಹೆಚ್.ಬಿ ಅವರು ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ಉಲ್ಲೇಖಿಸಿದ್ದಾರೆ. ಈ ನಿರ್ಣಯದಲ್ಲಿರುವ ಉದ್ದೇಶವೆಂದರೆ ಪ್ರತಿಯೊಂದು ಗ್ರಾಮ ಪಂಚಾಯಿತಿ ಮತ್ತು ಮುನಿಸಿಪಾಲಿಟಿಯಲ್ಲಿ ಆದಿಕರ್ನಾಟಕರು ಇದ್ದೇ ಇರಬೇಕೆಂಬುದಾಗಿ ಒಂದು ನಿಯಮವನ್ನು ಏರ್ಪಡಿಸಬೇಕಂಬುದು.[28] ದಲಿತ(ನಿಮ್ನ)ವರ್ಗದ ನಾಯಕರು ತಮ್ಮ ರಾಜಕೀಯ ಸ್ಥಾನಮಾನಗಳನ್ನು ಧೃಡಗೊಳಿಸುವ ಹಾಗೂ ಸುಗಮಗೊಳಿಸುವ ನಿಟ್ಟಿನಲ್ಲಿ ಹಲವಾರು

ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತಿದ್ದರು. ಅಲ್ಲದೆ ಇದು ಕೇವಲ ರಾಜಕೀಯ ಧೃಡತೆಯೊಂದಿಗೆ ತಳಕು ಹಾಕಿಕೊಳ್ಳದೆ ಸಾಮಾಜಿಕವಾಗಿ ತಮ್ಮ ಅಭ್ಯುಧಯವನ್ನು ಒಳಗೊಂಡಿತ್ತು. ಅಲ್ಲದೆ ನೆರೆಯ ಮದ್ರಾಸ್ ಪ್ರಾಂತ್ಯದಲ್ಲಿ ದಲಿತರಿಗೆ ನೀಡಿದ ಸ್ಥಾನಮಾನಗಳು ಸಂಸ್ಥಾನದಲ್ಲಿನ ದಲಿತರನ್ನು ಜಾಗೃತಿಗೊಳ್ಳುವಂತೆ ಪ್ರೇರಣೆ ನೀಡಿತು.

- **ನಿಮ್ನವರ್ಗದ ಜಮೀನುದಾರರು ಮತ್ತು ವರ್ತಕರು:**

ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತ-ನಿಮ್ನವರ್ಗದವರೆಂದರೆ ಕೃಷಿ-ಕೂಲಿ ಕಾರ್ಮಿಕರು ಮಾತ್ರ ಎಂಬ ಚಿಂತನೆಗಳು ಪ್ರಸಿದ್ಧಿ ಪಡೆದಂತಿದೆ. ಆದರೆ ಏಕೀಕರಣ ಪೂರ್ವ ಮೈಸೂರು ಸಂಸ್ಥಾನದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಬಹುಪಾಲು ಹಳ್ಳಿಗಳಲ್ಲಿ ಸ್ವಂತ ಭೂಮಿ ಇಲ್ಲದ ದಲಿತ-ನಿಮ್ನವರ್ಗದವರನ್ನು ತುಂಬ ವಿರಳವಾಗಿ ಕಾಣಬಹುದಾಗಿದೆ. ಮೈಸೂರು ಸಂಸ್ಥಾನದ ದಲಿತರ ಉದ್ಧಾರಕರಾದ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರಿನ ಅಶೋಕಪುರಂನ ರಸ್ತೆ ಇಕ್ಕೆಲಗಳಲ್ಲಿ ಕೂಲಿ ಕಾರ್ಮಿಕರಾಗಿ ಜೀವನ ಸಾಗಿಸುತ್ತಿದ್ದ ಜನರಿಗೆ ಶಾಶ್ವತವಾಗಿ ನೆಲೆಸುವಂತೆ ಮಾಡಲು ಭೂಮಿ ನೀಡಿದ್ದರು. ಇವರ ಬದುಕಿಗಾಗಿ ಅಶೋಕಪುರಂ ಬಳಿಯ ನೂರಾರು ಎಕರೆ ಭೂಮಿಯನ್ನೇ ವೀಳೆಯದಲೆ ಬೇಸಾಯ ಮಾಡಲು ನೀಡಿದರು. ಅಲ್ಲಿ ವೀಳೆಯದೆಲೆ ಈಗಲೂ ಬೆಳೆಯಲಾಗುತ್ತಿದ್ದು ''ಮೈಸೂರು ಚಿಗುರಲೆ" ಎಂದೇ ದಕ್ಷಿಣ ಭಾರತದಾದ್ಯಂತ ಖ್ಯಾತಿ ಪಡೆದಿದೆ ಹಾಗೂ ಸಹಸ್ರಾರು ಮಂದಿಯ ಬದುಕಿಗೆ ಆಸರೆಯಾಗಿ ನೆಮ್ಮದಿ ನೀಡಿದೆ...., ಜೀವನ ನಿರ್ವಹಣೆಗೆ ಅಗತ್ಯವಿರುವಷ್ಟು ಭೂಮಿಯನ್ನು ಹೊಂದುವುದರೊಂದಿಗೆ ಜಿಲ್ಲೆಯಲ್ಲಿ ಅಲ್ಲಲ್ಲಿ ನೂರಾರು ಎಕರೆ ಮಾಲೀಕತ್ವ ಹೊಂದಿದ ಆದಿಕರ್ನಾಟಕರನ್ನು ಕಾಣಬಹುದು. ದೊಡ್ಡಮನೆ ಭರಣಯ್ಯ ಎಂದೇ ಹೆಸರಾದ ಸೋಮನಾಥಪುರದ ಇವರ ಬಳಿ ಬಲು ಹೆಚ್ಚು ಭೂಮಿ ಇದ್ದಿತೆಂದು ತಿಳಿದುಬಂದಿದೆ.[29]

ನಿಮ್ನವರ್ಗದವರು ಕೃಷಿಯಷ್ಟೇ ಅಲ್ಲದೆ ವ್ಯಾಪಾರ ವಹಿವಾಟುಗಳಲ್ಲೂ ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ. ರೇಷ್ಮೆ ನೂಲು ತೆಗೆದು ರಫ್ತು ಮಾಡುವ ವೃತ್ತಿಯಲ್ಲಿ ತೊಡಗಿ ಭಾರೀ ಶ್ರೀಮಂತರಾದವರೂ ಉಂಟು. ಬ್ರಿಟಿಷರ ಕಾಲದಲ್ಲಿ ಪ್ರಾಣಿಗಳ ಚರ್ಮ ಹದ ಮಾಡಿ ಇಂಗ್ಲೆಂಡಿಗೆ ರಫ್ತು ಮಾಡುತ್ತಿದ್ದವರೂ ಈ ಜನಾಂದಲ್ಲಿದ್ದರು. ದಿ.ಕರಿಯಪ್ಪ, ಸೋಮನಹಳ್ಳಿ, ಮದ್ದೂರು ತಾಲ್ಲೂಕು, ವ್ಯವಸಾಯ ಉಪಕರಣಗಳಾದ ನೇಗಿಲು, ಕುಂಟೆ, ಮುಂತಾದವುಗಳ ತಯಾರಿಕೆಯಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸಿದ್ದರ ಬಗ್ಗೆ ತಿಳಿಯುತ್ತದೆ.[30]

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಆದಿಕರ್ನಾಟಕ ಜನಾಂಗದ ನೂರಾರು ಮಂದಿ ಪ್ರಸ್ತುತ ಊಟಿಯಲ್ಲಿ ಕೃಷಿ ಭೂಮಿಯನ್ನು ಸ್ವಂತವಾಗಿ ಹೊಂದಿದ್ದು, ಬೇಸಾಯದಲ್ಲಿ ತೊಡಗಿಕೊಂಡು ಅಲ್ಲಿಯೇ ನೆಲೆ ಕಂಡುಕೊಂಡಿದ್ದಾರೆ.

ಯಳಂದೂರು ತಾಲ್ಲೂಕಿನ ದುಗ್ಗಟ್ಟಿ ಗ್ರಾಮದ ದುಗ್ಗಟ್ಟಿ ನಂಜಯ್ಯ ಎನ್ನುವವರು ಆಗಿನ ಕಾಲಕ್ಕೆ ೧೨೫ ಎಕರೆ ಜಮೀನು ಹೊಂದಿದ್ದರು. ಆ ಜಮೀನಿನಲ್ಲಿ ೨೫ ಬಾವಿಗಳಿದ್ದು. ಜಮೀನುದಾರರಷ್ಟೇ ಅಲ್ಲದೆ ನಂಜಯ್ಯ ಅವರು ರೇಷ್ಮೆ ನೂಲು ತೆಗೆವ ೩೦ ಬೇಸೆನ್ ಗಳನ್ನು ಹೊಂದಿದ್ದು, ದಿನವೂ ೧೦೦ ಮಂದಿ ಕೆಲಸ ಮಾಡುತ್ತಿದ್ದರೆಂದು ತಿಳಿದುಬಂದಿದೆ. ೧೨೦ ರಾಸು ದನಕರುಗಳನ್ನು ಹೊಂದಿದ್ದು ಅವುಗಳ ಸಗಣಿ ಕಸ ಹಾಕಲು ೨೦ ತಿಪ್ಪೆ ರಾಸುಗಳಿದ್ದವೆಂದು

Tumbe Group of International Journals
Vol. 6, Issue No. 1, pp.67-78, January-April 2023 ISSN: 2581-8511

ವರ್ಣಿಸಲಾಗುತ್ತದೆ. ಪ್ರಸಿದ್ಧ ರೇಷ್ಮೆ ವ್ಯಾಪಾರಿಯಾದ ಇವರು ನೆರೆಯ ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಿಗೂ ರೇಷ್ಮೆ ವ್ಯಾಪಾರಕ್ಕಾಗಿ ಹೋಗುತ್ತಿದ್ದು ಕೊಡುಗೈ ದಾನಿಯಾಗಿದ್ದರು.

ಕೊಳ್ಳೇಗಾಲ ತಾಲ್ಲೂಕಿನ ಕಣ್ಣೂರು ಗ್ರಾಮದ ದೊಡ್ಡ ಜಮೀನ್ದಾರರೆನಿಸಿದ ಕಣ್ಣೂರು ಮಂಚಯ್ಯ ಅವರು ರೇಷ್ಮೆ, ವ್ಯಾಪಾರದಲ್ಲೂ ಹೆಸರು ಮಾಡಿದವರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಇವರು ಅಸ್ಪೃಶ್ಯರ ಹಕ್ಕುಗಳಿಗಾಗಿ (ಕೆರೆ, ಬಾವಿ ನೀರು ಬಳಕೆ) ಹೋರಾಟ ನಡೆಸಿ ಯಶಸ್ವಿಯಾದವರು. ತಮ್ಮ ಜನಾಂಗದ ದುರ್ಬಲ ಮಕ್ಕಳ ಓದಿಗೆ ಧನ, ಧಾನ್ಯ ನೀಡಿ ನೆರವಾಗುತ್ತಿದ್ದರು.

ಕೊಳ್ಳೇಗಾಲ ತಾಲ್ಲೂಕಿನ ಸಿಂಗಾನಲ್ಲೂರು ಗ್ರಾಮದ ರಾಟೆ ಸಿದ್ದಯ್ಯರವರು ರೇಷ್ಮೆ ನೂಲು ತಯಾರಕರು. ನೂರಾರು ಎಕರೆ ಭೂಮಿ ಸಾಗುವಳಿ ಮಾಡುತ್ತಿದ್ದರು. ಕುದುರೆ ಸಾರೋಟು ಬಳಸುತ್ತಾ ಲಾರಿ, ಟ್ರಾಕ್ಟರ್, ಕಾರುಗಳನ್ನು ಹೊಂದಿದ್ದರು. ಸ್ವತಃ ಕೆರೆಕುಂಟೆಗಳನ್ನು ನಿರ್ಮಿಸಿ, ಶಾಲಾ ಕಾಲೇಜುಗಳನ್ನು ತೆರೆಯಲು ನೆರವಾದವರು, ಸಮಾಜದ ಸೇವಾಧುರೀಣರೆಂದು ಜಿಲ್ಲಾದ್ಯಂತ ಹೆಸರಾಗಿ ಅಸಹಾಯಕರಿಗೆ ನೆರವಿನ ಹಸ್ತ ಚಾಚುತ್ತಿದ್ದರು.

ಗುಂಡ್ಲುಪೇಟೆ ತಾಲ್ಲೂಕಿನ ಶಿವಪುರದ ಗ್ರಾಮದ ಸೇಂದಿ ಕಂಟ್ರಾಕ್ಟರ್ ಸಾಹುಕಾರ ಪುಟ್ಟ ಮಾದಯ್ಯನವರು ಈ ಭಾಗದಲ್ಲಿ ಭಾರೀ ವಿಕ್ರಮವನ್ನೇ ಸಾಧಿಸಿದ್ದರೆ ಒಂದು ಸಾವಿರ ಎಕರೆಗೂ ಹೆಚ್ಚು ಭೂಮಿಯನ್ನು ಹೊಂದಿದ್ದರು ಹಾಗೂ ಅವರ ಮನೆ ೧೬ ಕಂಬದ ತೊಟ್ಟಿ ಮನೆಯಾಗಿತ್ತಲ್ಲದೆ ಅವರ ಮನೆಯ ಕಿಟಕಿ, ಬಾಗಿಲು ಮತ್ತು ತಲೆಗಳು ಶ್ರೀಗಂಧದ ಮರಗಳಿಂದ ಕೂಡಿದ್ದವು ಎಂಬುದು ಆಶ್ಚರ್ಯಕರ. ಶ್ರೀಗಂಧ ಮರವನ್ನು ಬಳಸಿ ಮನೆ ನಿರ್ಮಿಸಿದ್ದು ಐತಿಹಾಸಿಕ ಏಳರಿಂದ ಎಂಟು ಮನೆಗಳನ್ನು ಅವರು ನಿರ್ಮಿಸಿದ್ದು ಅವುಗಳು ಈಗಲೂ ಶಿವಪುರ ಗ್ರಾಮದಲ್ಲಿ ಇರುವುದನ್ನು ಕಾಣಬಹುದು, ಮೈಸೂರು ಮಹಾರಾಜರಂತೆ ಸದಾ ಕುದುರೆಯ ಮೇಲೆ ಸಂಚರಿಸುತ್ತಿದ್ದ ಸಾಹುಕಾರ ಪುಟ್ಟಮಾದಯ್ಯನವರು ಚಿನ್ನ ಬೆಳ್ಳಿಯನ್ನು ಷೇರು ಮತ್ತು ಕೊಳಗಗಳಲ್ಲಿ ಅಳೆದು ವಹಿವಾಟ ನಡೆಸುತ್ತಿದ್ದಾರೆಂದೂ, ವಿಜಯನಗರ ಸಾಮ್ರಾಜ್ಯದ ವೈಭವಗಳನ್ನು ಇಲ್ಲಿ ನಾವು ಕಾಣುತ್ತಿದ್ದವು ಎಂದು ಆ ಊರಿನ ಹಿರಿಯ ಜೀವಗಳು ಈಗಲೂ ಮೆಲುಕು ಹಾಕುತ್ತಿದ್ದಾರೆ. ೧೮ ಜತೆ ಎತ್ತು ಗಾಡಿಗಳು ೩೦೦ಕ್ಕೂ ಹೆಚ್ಚು ದನಕರು ರಾಸುಗಳು ಹಾಗೂ ಸೇಂದಿಯನ್ನು ಇಳಿಸಲು ಹಾಗೂ ಮಾರಾಟ ಮಾಡಲು ೨೦೦ಕ್ಕೂ ಹೆಚ್ಚು ಕತ್ತೆಗಳನ್ನು ಅವರು ನಿರ್ವಹಿಸುತ್ತಿದ್ದರು ಎಂದು ಅವರ ರಾಜು ಹೇಳುತ್ತಾರೆ.

ನಿಮ್ನವರ್ಗದವರು ವಿವಿಧ ವ್ಯಾಪಾರಗಳ ಜೊತೆಗೆ ರೇಷ್ಮೆ, ಬೆಲ್ಲ, ಹಸುಗಳ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರ ಬಗ್ಗೆ ತಿಳಿಯುತ್ತದೆ. ಯಳಂದೂರು ತಾಲ್ಲೂಕಿನ ಮಾಂಬಳ್ಳಿ, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಗಳು ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದು ಶೇ. ೧೦ಕ್ಕೂ ಹೆಚ್ಚು ಮಂದಿ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದರು.

ನಂಜನಗೂಡು ತಾಲ್ಲೂಕಿನ ದೇವರಸನಹಳ್ಳಿಯ ದಲ್ಲಾಳಿ ಸಿದ್ದಯ್ಯ, ಚಾಮರಾಜನಗರದ ಹೆಗ್ಗೋಡಿ ರಂಗಸ್ವಾಮಿ (ಗುತ್ತಿಗೆದಾರರು) ಬಾಗಳಿ ಪುಟ್ಟಸ್ವಾಮಿ, ಗುಂಡ್ಲು ಪೇಟೆ ತಾಲ್ಲೂಕಿನ ಮೂಕಹಳ್ಳಿಯ ಪುಟ್ಟಯ್ಯ, ಸೋಮಹಳ್ಳಿಯ ಮರಿನಂಜಯ್ಯ,

ನಂಜನಗೂಡು ತಾಲ್ಲೂಕಿನ ನಗರ ಜೋಗಯ್ಯ, ಮೈಸೂರಿನ ಅಶೋಕಪುರಂನ ಹೊಟ್ಟೆಪ್ಪ ಪಟೇಲ್ ಗೋವಿಂದಯ್ಯ, ಯಜಮಾನ್ ರಂಗಧಾಮಯ್ಯ, ಯಜಮಾನ್ ಬೋಸಯ್ಯ, ಕೂಸಯ್ಯ ಮೊದಲಾದವರು ಪ್ರಮುಖ ಜಮೀನ್ದಾರರು, ಶ್ರೀಮಂತರು, ದಾನಿಗಳು, ಸಮಾಜಸೇವಕರು ಎಂದು ಹೆಸರಾಗಿದ್ದಾರೆ.[32]

ಎಡ್ಗರ್ ಥರ್ಸ್ಟನ್ ಅವರು ಮೈಸೂರು ಸಂಸ್ಥಾನದಲ್ಲಿ ನಿಮ್ನವರ್ಗದವರ ಭೂ ಕಂದಾಯದ ಬಗ್ಗೆ ಉಲ್ಲೇಖಿಸಿದ್ದಾರೆ. ಅದು ಈ ಮುಂದಿನಂತಿದೆ, the Mysore systemfully permits the Holeyas and Madigs to hold land in their own right, and as sub-tenants they are to be found almost everywhere. The highest amount of land assessment paid by a single Holeya is Rs. 279 in the Bangalore district, and the lowest six pies in the Kolar and Mysore districts. The quota paid by the out castes towards the land revenue of the country aggregates no less than three lakhs of rupees, more than two-thirds being paid by the Holeyas, and the remainder by the Madigs. These facts speak for themselves, and afford a reliable index to the comparative well-being of these people. Instances may also be readily quoted, in which individual Holeyas, etc., have risen to be money-lenders, and enjoy comparative affluence. Coffee cultivation and allied industries have thrown much good fortune into their lap.[33]

ಈ ಮೇಲಿನ ಹೇಳಿಕೆಯ ಅನ್ವಯ ಮೈಸೂರಿನ ಭೂ ಅಧಿಕಾರ ಪದ್ಧತಿಯು ಹೊಲೆಯರು ಮತ್ತು ಮಾದಿಗರ ತಮ್ಮದೇ ಆದಂತಹ ಅಧಿಕಾರ-ಅನುಮತಿಯನ್ನು ಹೊಂದಿದ್ದು, ಎಲ್ಲೆಡೆಯು ಉಪ ಹಿಡುವಳಿದಾರರಾಗಿ ಕಂಡುಬರುತ್ತಾರೆ. ಮೈಸೂರು ಸಂಸ್ಥಾನದ ಬೆಂಗಳೂರು ಜಿಲ್ಲೆಯಲ್ಲಿ ಹೊಲೆಯ ವ್ಯಕ್ತಿಯೊಬ್ಬನಿಂದ ಸಂದಾಯವಾದ ಅತ್ಯಧಿಕ ಭೂ ತೆರಿಗೆಯ ೨೭೯ ರೂಪಾಯಿಗಳು ಮತ್ತು ಅತಿ ಕಡಿಮೆ ಭೂ ತೆರಿಗೆಯು ೬ ಪೈಸೆ ಕೋಲಾರ ಮತ್ತು ಮೈಸೂರು ಜಿಲ್ಲೆಗಳದ್ದು ಆಗಿದೆ. ಅಲ್ಲದೆ ದೇಶದ ಭೂ ಕಂದಾಯದಲ್ಲಿ ಮೂರು ಲಕ್ಷ ರೂಪಾಯಿಗಿಂತಲೂ ಅಧಿಕ ಪಾಲು ಅಸ್ಪೃಶ್ಯರದ್ದಾಗಿತ್ತು. ಇದರಲ್ಲಿ ಮೂರನೇ ಎರಡು ಭಾಗಕ್ಕಿಂತಲೂ ಹೆಚ್ಚಿನ ಹಣವನ್ನು ಹೊಲೆಯರು ನೀಡಿದ್ದಾರೆ. ಉಳಿದಿದ್ದನ್ನು ಮಾದಿಗರು ನೀಡಿದ್ದಾರೆ. ಈ ಮೇಲಿನ ಅಂಶಗಳು ನಿಮ್ನವರ್ಗದ ಸುಧಾರಿತ ಜೀವನಮಟ್ಟವನ್ನು ಸೂಚಿಸುತ್ತದೆ. ಅಲ್ಲದೆ ಹಲವಾರು ಹೊಲೆಯರ ಆರ್ಥಿಕ ಸ್ಥಿತಿಯು ಉನ್ನತ ಮಟ್ಟದಲ್ಲಿದ್ದು, ಇವರಲ್ಲಿ ಕೆಲವರು ಲೇವಾದೇವಿಗಾರರರು, ಕಾಫಿ ಬೇಸಾಯ ಮತ್ತು ಇದ್ದಕ್ಕೆ ಪೂರಕವಾದ ಉದ್ದಿಮೆಗಳಲ್ಲಿ ತೊಡಗಿಕೊಂಡಿದ್ದಾರೆ. ಮೇಲಿನ ಉಲ್ಲೇಖಗಳ ಅನ್ವಯ ನಿಮ್ನವರ್ಗದ ಹಲವರು ಜಮೀನ್ದಾರರು, ವರ್ತಕರು ಇದ್ದುದ್ದರ ಬಗ್ಗೆ ತಿಳಿಯುತ್ತದೆ. ಅಲ್ಲದೆ ಏಕೀಕರಣ ಪೂರ್ವ ಮೈಸೂರು ಪ್ರಾಂತ್ಯದಲ್ಲಿ ನಿಮ್ನವರ್ಗ ಸಮುದಾಯದ ನಾಯಕರುಗಳು ರಾಜಕೀಯವಾಗಿ ಬೆಳವಣಿಗೆಯಾಗಲು ನೆರೆಯ ಸಂಸ್ಥಾನದ ಆಗು-ಹೋಗುಗಳನ್ನು ಗ್ರಹಿಸುತ್ತಿದ್ದರು. ಅಲ್ಲದೆ ನೆರೆಯ ಸಂಸ್ಥಾನದಲ್ಲಿ ನೀಡಿದ ಸೌಲಭ್ಯಗಳ ಮಾದರಿಯಲ್ಲಿಯೇ ಮೈಸೂರು ಸಂಸ್ಥಾನದ ಸ್ಥಿತಿಗತಿಗೆ ಅನುಗುಣವಾಗಿ ತಮ್ಮ ವರ್ಗಗಳಿಗೆ ದೊರಕಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮನವಿಗಳನ್ನು ಸಲ್ಲಿಸುತ್ತಿದ್ದರು. 1920-1947ರ ವರೆಗಿನ ಕಾಲಾವಧಿಯಲ್ಲಿ ಸಂಸ್ಥಾನದಾದ್ಯಂತ ಸುಮಾರು 66-67 ಜನ ನಿಮ್ನವರ್ಗದ ಪ್ರತಿನಿಧಿಗಳು ಈ

Tumbe Group of International Journals
Vol. 6, Issue No. 1, pp.67-78, January-April 2023 ISSN: 2581-8511

ಸಭೆಯ ಸದಸ್ಯರಾಗಿದ್ದರು.[34] ಈ ಕೆಳಕಂಡ ಪಟ್ಟಿಯಲ್ಲಿ ಕೆಲವು ನಿಮ್ನವರ್ಗದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರ ವಿವರಗಳನ್ನು ಕಾಣಬಹುದಾಗಿದೆ.

**ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ನಿಮ್ನವರ್ಗ ಸಮುದಾಯದ ನಾಯಕರುಗಳು**

| ಕ್ರ.ಸಂ | ಸದಸ್ಯರ ಹೆಸರು | ಸದಸ್ಯತ್ವ ವರ್ಷ | ಲಿಂಗ |
|---|---|---|---|
| 1 | ಮುರುಗೇಶನ್ ಪಿಳ್ಳೆ<br>(ತಮಿಳು ಮೂಲದ ನಿಮ್ನವರ್ಗದವರು) | ೧೯೧೯ | ಪುರುಷ |
| 2 | ಬಿ.ಸಿ ಚಲುವಯ್ಯ | - | ಪುರುಷ |
| 3 | ಹನುಮಯ್ಯ. ಟಿ | - | ಪುರುಷ |
| 4 | ಆಟದ ಪೆನ್ನಯ್ಯ | - | ಪುರುಷ |
| 5 | ದೊಡ್ಡಯ್ಯ | - | ಪುರುಷ |
| 6 | ಜಾತ್ರೆ ನಾಯಕ್(ಬಂಜಾರ ಸಮುದಾಯ) | - | ಪುರುಷ |
| 7 | ಎಂ.ಸಿ. ಚಲುವಯ್ಯ | - | ಪುರುಷ |
| 8 | ಆರ್ ಚನ್ನಿಗರಾಮಯ್ಯ | 1937 | ಪುರುಷ |
| 9 | ಪುಟ್ಟಮಾದಮ್ಮ | 1941 | ಮಹಿಳೆ |
| 10 | ರುಕ್ಮಣಿಯಮ್ಮ | 1945 | ಮಹಿಳೆ |
| 11 | ಪೂಸಾಮಿ.ಕೆ | - | ಪುರುಷ |
| 12 | ಎಸ್.ಎಂ.ನಾರಾಯಣಸ್ವಾಮಿ ಪಿಳ್ಳೆ<br>(ತಮಿಳು ಮೂಲದ ನಿಮ್ನವರ್ಗದವರು) | - | ಪುರುಷ |
| 13 | ಹುಚ್ಚಣ್ಣ | 1942 | ಪುರುಷ |
| 14 | ಎನ್.ಹನುಮಂತಪ್ಪ | - | ಪುರುಷ |
| 15 | ವೆಂಕಟರಾಮನ್ ಬೋಯಿ | - | ಪುರುಷ |
| 16 | ಮಾಧಯ್ಯ ಎಂ<br>(ಅಗರ ಮಾಂಬಳ್ಳಿ ಮಾದಯ್ಯ) | 1938 | ಪುರುಷ |
| 17 | ಡಿ. ಮಾಯಿಗಯ್ಯ ಹನುಮನಾಳು | 1938 | ಪುರುಷ |
| 18 | ಯರಿಯೂರು ಕುನ್ನಯ್ಯ | 1938 | ಪುರುಷ |
| 19 | ನೇರಳೆ ಮಾದಯ್ಯ | 1938 | ಪುರುಷ |
| 20 | ಮರಿಗಂಡಯ್ಯ | 1938 | ಪುರುಷ |
| 21 | ದೊಡ್ಡ ಮಲ್ಲಯ್ಯ | 1938 | ಪುರುಷ |
| 22 | ಅಮವಾಸ್ಯೆ ಶ್ರೀಕಂಠಪ್ಪ | - | ಪುರುಷ |
| 23 | ಬಿ.ಮುನಿವೆಂಕಟಪ್ಪ | - | ಪುರುಷ |
| 24 | ಕೆ.ವಿ.ವೀರಣ್ಣ | - | ಪುರುಷ |

ಒಟ್ಟಾರೆ ಪ್ರಜಾಪ್ರತಿನಿಧಿ ಸಭೆಯಲ್ಲಿ ನಿಮ್ನವರ್ಗದವರಿಗೆ 1919ರ ನಂತರ ಅವಕಾಶಗಳನ್ನು ಕಲ್ಪಿಸಲಾಯಿತು. ನಿಮ್ನವರ್ಗದವರ ಹಲವಾರು ಹೋರಾಟದ ಫಲವಾಗಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ ನಿಮ್ನವರ್ಗದವರಿಗೆ ತೋರಿಸಿದ ಅನುಕಂಪದ ಆಧಾರದ ಮೇಲೆ ಶಿಕ್ಷಣ, ಉದ್ಯೋಗ, ಪ್ರಜಾಪ್ರತಿನಿಧಿ ಸಭೆಯಲ್ಲಿ ಅವಕಾಶಗಳು ದೊರೆತವು. 1919-1947ರ ವರೆಗೆ ಸುಮಾರು 67ಕ್ಕೂ ಹೆಚ್ಚು ಜನರು ಸದಸ್ಯರಾಗಿದ್ದರಿಂದ ನಿಮ್ನವರ್ಗದಲ್ಲಿ ಜಮೀನ್ದಾರರು, ವರ್ತಕರು ಇದ್ದುದ್ದರ ಬಗ್ಗೆ ಹಾಗೂ ಆರ್ಥಿಕವಾಗಿ ಸಬಲರಾಗಿದ್ದರ ಬಗ್ಗೆ ತಿಳಿಯಬಹುದು. ಒಟ್ಟಾರೆ ಲೇಖನವು ನಿಮ್ನವರ್ಗದವರು ರಾಜಕೀಯವಾಗಿ ಇಟ್ಟ ಹೆಜ್ಜೆಗಳು ಹಾಗೂ ಸಂಸ್ಥಾನದಲ್ಲಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಹೊಂದಿದ ಪ್ರಾತಿನಿಧ್ಯದ ಬಗೆಯನ್ನು

ತಿಳಿಯಬಹುದಾಗಿದೆ. ಅಂತಿಮವಾಗಿ ನಿಮ್ನವರ್ಗದವರೆಲ್ಲರು ನಿರ್ಗತಿಕರು-ದುರ್ಬಲರಲ್ಲ ಆದರೆ ಎಲ್ಲಾ ನಿಮ್ನವರ್ಗದವರು ಧನಿಕರಲ್ಲ ಎಂಬುದನ್ನು ಇಲ್ಲಿ ಪ್ರಸ್ಥಾಪಿಸಬಹುದು.

**ಕೊನೆಟಿಪ್ಪಣಿಗಳು:**


[1] ಎಸ್ ಚಂದ್ರಶೇಖರ್., (2006), "ವಸಾಹತುಕಾಲೀನ ಕರ್ನಾಟಕ", ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪು. 71.

[2] ಚಿನ್ನಸ್ವಾಮಿ ಸೋಸಲೆ ಎನ್., (2018), "ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. 96.

[3] ಎಸ್ ಚಂದ್ರಶೇಖರ್., (1983), "ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು 1881-1940", ಅಂಕಣ ಪ್ರಕಾಶನ, ಬೆಂಗಳೂರು. ಪು. 38.

[4] ಎಸ್ ಚಂದ್ರಶೇಖರ್., (2002), "ಆಧುನಿಕ ಕರ್ನಾಟಕದ ಆಂದೋಲನಗಳು", ನಮ್ಮ ಪ್ರಕಾಶನ, ತಿಪಟೂರು. ಪು. 57.

[5] ಡಿ.ವಿ.ಗುಂಡಪ್ಪ., (2008), "ಜ್ಞಾಪಕ ಚಿತ್ರಶಾಲೆ ಸಂಪುಟ-4, ಮೈಸೂರಿನ ದಿವಾನರು", ಕಾವ್ಯಾಲಯ ಪ್ರಕಾಶಕನ, ಮೈಸೂರು. ಪು. 16.

[6] ಜನಗಣತಿ ಕೈಪಿಡಿ, ಚಿತ್ರದುರ್ಗ ಜಿಲ್ಲೆ-1951., (1956), ನಿರ್ದೇಶಕರು, ಮುದ್ರಣ, ಸಾಮಾಗ್ರಿ ಮತ್ತು ಪ್ರಕಟಣೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು. ಪು. 95.

[7] ಎಸ್ ಚಂದ್ರಶೇಖರ್., (1983), ಪೂರ್ವೋಕ್ತ, ಪು. 88.

[8] ಸೂರ್ಯನಾಥ ಯು ಕಾಮತ್., (2021), ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ ಪಬ್ಲಿಕೇಶನ್, ಬೆಂಗಳೂರು. ಪು. 247-248.

[9] ಕೆ.ಎಂ. ವಿಂಧ್ಯಾ., (2019), "ಆಧುನಿಕ ಮೈಸೂರು ಸಂಸ್ಥಾನದಲ್ಲಿ ದಲಿತ ನಾಯಕತ್ವ ಮತ್ತು ಚಳವಳಿಯ ಬೆಳವಣಿಗೆ (೧೮೯೦-೧೯೪೭)", ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪು. 160.

[10] ಎಸ್ ಚಂದ್ರಶೇಖರ್., (1983), ಪೂರ್ವೋಕ್ತ, ಪು. 88.

[11] ಸೂರ್ಯನಾಥ ಯು ಕಾಮತ್., (2021), ಪೂರ್ವೋಕ್ತ, ಪು. 248-249.

[12] ಕೆ.ಎಂ. ವಿಂಧ್ಯಾ., (2019), ಪೂರ್ವೋಕ್ತ, ಪು. 161.

[13] ಎಸ್ ಚಂದ್ರಶೇಖರ್., (1983), ಪೂರ್ವೋಕ್ತ, ಪು. 99.

[14] ಕೆ.ಎಂ. ವಿಂಧ್ಯಾ., (2019), ಪೂರ್ವೋಕ್ತ, ಪು. 175.

[15] ಎಸ್ ಚಂದ್ರಶೇಖರ್., (1983), ಪೂರ್ವೋಕ್ತ, ಪು. 42.

[16] ಕೆ.ಎಂ. ವಿಂಧ್ಯಾ., (2019), ಪೂರ್ವೋಕ್ತ, ಪು. ೧೭೮.

[17] ಸುಭಾಷ್ ಭರಣಿ., (2005), "ಧರೆಗೆ ದೊಡ್ಡವರು-ಅವಿಭಜಿತ ಮೈಸೂರು ಜಿಲ್ಲೆಯ ಆದಿಕರ್ನಾಟಕರು-ಒಂದು ಅಧ್ಯಯನ", (ಪ್ರಕಟಿತ ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ), ದ್ರಾವಿಡ್ ಪಬ್ಲಿಕೇಶನ್ಸ್, ಮೈಸೂರು. ಪು. 138.

[18] Edgar Thurston., K.Rangachari., (1909), "Castes and Tribes of Southern India", Volume-2, Government Press, Madras. Page No. 337.

[19] ಕೆ.ಎಂ. ವಿಂಧ್ಯಾ., (2019), ಪೂರ್ವೋಕ್ತ, ಪು. 18೮.